ಯೋಜನೆ	ವರ್ಗ	ಆರ್ಥಿಕ ಸಹಾಯ		
		ಸಹಾಯ ಧನ	ಸಾಲ	ಒಟ್ಟು
ನಗರ ಆಶ್ರಯ	ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ		25000	25000
	ಸಾಮಾನ್ಯ			
ಗ್ರಾಮೀಣ ಆಶ್ರಯ	ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ	20000	-	20000
	ಸಾಮಾನ್ಯ	10000	-	20000
ಗ್ರಾಮೀಣ ಅಬೇಂಡ್ಕರ್	ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ	20000	-	20000

ಅ) ತಾರಮ್ಯವಿದೆ. ಯೋಜನೆಯ ಮಾರ್ಗಸೂಚಿಯಂತೆ ನಗರ ಪ್ರದೇಶಗಳಿಗೆ ಸಹಾಯಧನ ನೀಡಲಾಗುತ್ತಿಲ್ಲ.

ಇ) ಹಣಕಾಸಿನ ಲಭ್ಯತೆಯ ಆಧಾರದ ತೀರ್ಮಾನಿಸಲಾಗುವುದು.

ತುಮಕೂರು ಜಿಲ್ಲೆ ತುರುವೇಕೆರೆ ತಾಲ್ಲೂಕಿನ ತಂಡಗ ಗ್ರಾಮದ ಐತಿಹಾಸಿಕ ಮಹತ್ವ

989 (1138) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ಅಣ್ಣಯ್ಯ) (ತುರುವೆಕೆರೆ): ಮಾನ್ಯ ಕನ್ನಡ ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆ ತುರುವೆಕೆರೆ ತಾಲ್ಲೂಕು, ತಂಡಗ ಗ್ರಾಮವು ಐತಿಹಾಸಿಕ ಮಹತ್ವವನ್ನು ಪಡೆದಿದೆಯೇ;

ಆ) ಇದು ಯಾರ ಹೆಸರಿನಿಂದ ಪ್ರಚಲಿತದಲ್ಲಿದೆ; ಇಲ್ಲಿ ಶಾಲೀವಾಹನ ಶಕೆಯ ಪುರಷ ಶಾಲೀವಾಹನನು ಜನಿಸಿದ ಸ್ಥಳವೆಂಬುವುದು ಗುರುತಿಸಿದೆಯೇ; ಇದರ ಉಳಿವಿಗಾಗಿ ಕನ್ನಡ ಸಂಸ್ಕೃತಿ ಇಲಾಖೆಯ ಪಾತ್ರವೇನು;

ಇ) ಗುರುತಿಸಿದ್ದಲ್ಲಿ, ಇದರ ನೆನಪಿಗಾಗಿ ಏನನ್ನಾದರೂ ನಿರ್ಮಿಸಲಾಗಿದೆಯೇ; (ಪುರಾತತ್ವ ಇಲಾಖೆ ಈ ಬಗ್ಗೆ ಪರಿಗಣಿಸಿದೆಯೇ)

ಈ) ಶಾಲೀವಾಹನ ಜನನ, ಜೀವನ ಹಾಗೂ ಅಂತಿಮದಿನಗಳ ಮುಂತಾದ ವಿವರವಾದ ಮಾಹಿತಿಗಳಿದ್ದರೆ (ದಾಖಲೆ ಪ್ರತಿಗಳು ಇದ್ದರೆ) ಒದಗಿಸುವುದು;

ಉ) ಶಾಲೀವಾಹನ ವಂಶಸ್ಥರು ಯಾರಾದರೂ ಇರುವರೇ; ವಿವರಗಳನ್ನು ಒದಗಿಸುವುದು.

ಶ್ರೀಮತಿ ರಾಣಿ ಸತೀಶ್ (ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು) :

ಅ) ಹೌದು, ಐತಿಹಾಸಿಕ ಮಹತ್ವವನ್ನು ಪಡೆದಿದೆ.

ಆ) ಶಾಸನಗಳಲ್ಲಿ ಇದನ್ನು ಶಂಕರನಾರಾಯಣ ಪುರ ಎಂದು ಕರೆಯಲಾಗಿದೆ. ಶತ ಪುರುಷ ಶಾಲೀವಾಹನನು ತಂಡಗ ಗ್ರಾಮದಲ್ಲಿ ಹುಟ್ಟಿದನೆಂದು ಐತಿಹ್ಯವಿದೆ. ಈ ಗ್ರಾಮದಲ್ಲಿರುವ ಚನ್ನಕೇಶವ ದೇವಾಲಯವು ರಾಜ್ಯ ಸಂರಕ್ಷಿತ ಸ್ಮಾರಕವಾಗಿದೆ.

ಇ) ಶಾಲಿವಾಹನನು ಇಲ್ಲಿ ಹುಟ್ಟಿದನೆಂದು ಐತಿಹ್ಯವಿದೆ. ಆದರೆ ಅವನ ಜನ್ಮ ಸ್ಥಳವನ್ನು ಗುರುತಿಸಲು ಸಾಧ್ಯವಾಗಿರುವುದಿಲ್ಲ. ಇದರ ನೆನಪಿಗಾಗಿ ಪುರಾತತ್ವ ಇಲಾಖೆಯ ವತಿಯಿಂದ ಏನನ್ನು ನಿರ್ಮಿಸಿರುವುದಿಲ್ಲ.

ಈ) ಶಾಲಿವಾಹನ ಜೀವನಕ್ಕೆ ಸಂಬಂಧಿಸಿದಂತೆ ಯಾವುದೇ ಮಾಹತಿ ಲಭ್ಯವಿರುವುದಿಲ್ಲ

ಉ) ಈ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ

ಬರ ಪರಿಸ್ಥಿತಿಯ ಪರಿಣಾಮ ಔಷಧ ಖರೀದಿಗೆ ಕೇಂದ್ರದ ನೆರವು

990 (1139) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ಅಣ್ಣಯ್ಯ) (ತುರುವೇಕೆರೆ): ಮಾನ್ಯ ಆರೋಗ್ಯ, ಕುಟುಂಬ ಕಲ್ಯಾಣ ಹಾಗೂ ವಾರ್ತಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಬೀಕರ ಬರಗಾಲ ಹಾಗೂ ಕುಡಿಯುವ ನೀರಿನ ಅಭಾವದ ಹಿನ್ನೆಲೆಯಲ್ಲಿ ಕೇಂದ್ರವು ಔಷಧ ಖರೀದಿಗೆ ನೆರವು ನೀಡಿದೆಯೆ;

2) ಕೇಂದ್ರದಿಂದ ಇದಕ್ಕಾಗಿ ಬಿಡುಗಡೆ ಮಾಡಿರುವ ಹಣವೆಷ್ಟು ಸದರಿ ಹಣವನ್ನು ಬಳಕೆ ಮಾಡಿ ಔಷಧಿ ಖರೀದಿ ಜಿಲ್ಲಾವಾರು ವಿತರಿಸಲಾಗಿದೆಯೆ;

3) ಬರಪೀಡಿತ ಜಿಲ್ಲೆಗಳೆಂದು ಗುರುತಿಸಿರುವ ಜಿಲ್ಲೆಗಳಾವುವು; ಅವುಗಳಿಗೆ ಎಷ್ಟೆಷ್ಟು ನೆರವು ನೀಡಲಾಗಿದೆ;

4) ನೈಸರ್ಗಿಕ ವಿಕೋಪದ ಸಂದರ್ಭದಲ್ಲಿ ಸಾಂಕ್ರಾಮಿಕ ರೋಗ ತಡೆಗಟ್ಟಲು ಯಾವ ಅನುದಾನದಲ್ಲಿ ಈ ಹಣವನ್ನು ಒದಗಿಸಲಾಗಿದೆ;

5) ಈ ನಿಟ್ಟಿನಲ್ಲಿ ಸಮುದಾಯ ಆರೋಗ್ಯ ಕೇಂದ್ರಗಳ ಸುಧಾರಣೆಗಾಗಿ ಜರ್ಮನಿಯ ಸಹಾಯವನ್ನು ಪಡೆಯಲಾಗುವುದೇ;

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ, ಕುಟುಂಬ ಕಲ್ಯಾಣ ಹಾಗೂ ವಾರ್ತಾ ಸಚಿವರು):

1) ಇಲ್ಲ

2) ಉದ್ಭವಿಸುವುದಿಲ್ಲ

3) ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಗಳನ್ನು ಬಿಟ್ಟು ಉಳಿದ ಜಿಲ್ಲೆಗಳೆಲ್ಲವು ಬರಪೀಡಿತ ಜಿಲ್ಲೆಗಳೆಂದು ಕಂದಾಯ ಇಲಾಖೆ ತೀರ್ಮಾನಿಸಿದೆ. ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ನೀಡಿರುವ ಔಷಧಿಗಳ ಒಟ್ಟು ಮೊತ್ತದ ವಿವರಗಳನ್ನು ಪ್ರತ್ಯೇಕವಾಗಿ ಅನುಬಂಧದಲ್ಲಿ ನೀಡಲಾಗಿದೆ.

4) ರಾಜ್ಯ ಸರ್ಕಾರ ಸಾಂಕ್ರಾಮಿಕ ರೋಗ ತಡೆಗಟ್ಟಲು 2002-03 ನೇ ಸಾಲಿನಲ್ಲಿ ರೂ.11,58,48,271-00 ಮೊತ್ತದ ಔಷಧಿ ಖರೀದಿಸಿ ಎಲ್ಲಾ ಜಿಲ್ಲೆಗಳಿಗೂ ವಿತರಿಸಲಾಗಿದೆ. ಇದಲ್ಲದೆ ತುರ್ತು ಸಂದರ್ಭಕ್ಕಾಗಿ ಜೀವರಕ್ಷಕ ಔಷಧಿಗಳನ್ನು ರೂ.5,11,28,758-00 ಖರೀದಿಸಿ ಕಾಪು ದಾಸ್ತಾನು ಇಟ್ಟುಕೊಳ್ಳಲಾಗಿದೆ.

5) ಇಲ್ಲ